# ಸುರಗಿರಿ

## ಸಮರಭೂಮಿಯಲ್ಲಿ ಶಾಂತಿಯನ್ನು ಅರಸಿ



**ತುಮಕೂರಿನ ಸುತ್ತಮುತ್ತ ಚಾರಣಿಗರು ಹಾಗೂ ಇತಿಹಾಸದ ಕುತೂಹಲಿಗಳನ್ನು ಆಕರ್ಷಿಸುವ ಹಲವು ಬೆಟ್ಟಗಳಲ್ಲಿ 'ಸುರಗಿರಿ ದುರ್ಗ'ವೂ ಒಂದು. 'ನಿಜಗಲ್ ಬೆಟ್ಟ' ಎಂದೂ ಕರೆಸಿಕೊಳ್ಳುವ ಈ ಎತ್ತರದ ಪ್ರದೇಶ ಪ್ರಾಕೃತಿಕ ಸೌಂದರ್ಯ, ಚಾರಣದ ಸಾಧ್ಯತೆಗಳ ಜೊತೆಗೆ ಇತಿಹಾಸದ ಪಿಸುನುಡಿಗಳಿಂದಲೂ ಗಮನ ಸೆಳೆಯುವಂತಹದ್ದು.**

**■ ಡಾ. ಕೀರ್ತಿ ಮಲ್ಹೋತ್ರ**

ಕೆಲವು ವರ್ಷಗಳ ಹಿಂದೆ, ಬೆಂಗಳೂರಿನಿಂದ ತುಮಕೂರಿಗೆ ಹೊರಟ ಪ್ರಯಾಣಿಕರಿಂದ ಕಿಕ್ಕಿರಿದ ಪ್ಯಾಸೆಂಜರ್ ರೈಲಿನಲ್ಲಿ, ಎಡಭಾಗದ ಬಾಗಿಲ ಬಳಿ ನಿಂತು ಪಯಣಿಸುತ್ತಿದ್ದೆ. ದಾಬಸ್‌ಪೇಟೆಗೆ ಬರುತ್ತಾ ರೈಲು ವೇಗ ತಗ್ಗಿಸಿ ಮೆಲ್ಲನೆ ಸರಿಯುತ್ತಿದ್ದಂತೆ, ರೈಲು ಹಳಿಗಳಿಗೆ ಬಲು ಸಮೀಪವಿದ್ದ ಒಂದು ಬೆಟ್ಟ ಕಂಡಿತು. ಅದರ ಶಿರದ ಮೇಲೆ ಹೆಬ್ಬಂಡೆಗಳು ಈಗ ಉರುಳಿ ಬೀಳುವವೇನೋ ಎಂಬಂತೆ ತುದಿಗಾಲಲ್ಲಿ ನಿಂತಿದ್ದವು.

ಮುಂದೊಂದು ದಿನ ದಾಬಸ್‌ಪೇಟೆಯಲ್ಲಿ ಇಳಿದು, ರೈಲು ನಿಲ್ದಾಣದಿಂದ ಹೊಲಗದ್ದೆಗಳ ಮೂಲಕ ಕಿರುದಾರಿಯಲ್ಲಿ ನಡೆದು ಊರು ತಲುಪಿ, ಅಲ್ಲಿಂದ ಹಳ್ಳಿಗಳಿಗೆ ಸಮಾನಾಂತರವಾಗಿ ಹಾಯ್ದ ರಾಷ್ಟ್ರೀಯ ಹೆದ್ದಾರಿ ಮೂಲಕ ಉದ್ದಕ್ಕೆ ಬಂದಾಗ, ಎದುರಿಗೆ ಒಂದು ನಾಮಫಲಕ ಕಂಡಿತು; ಅದರಲ್ಲಿ 'ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯ ಮತ್ತು ಸಿದ್ಧರ ಬೆಟ್ಟ ಗೇಟ್ (1.5 ಕಿ.ಮೀ.)' ಎಂದು ಬರೆದಿತ್ತು. ಇದಕ್ಕೆ ಹತ್ತಿರವಾಗಿ ರೈಲು ಹಳಿಯ ಕೆಳಗೆ ಒಂದು ಅಡಿಹಾದಿ, 'ಅಂಡರ್‌ಪಾಸ್' ಕಾಣಿಸಿತು. ಅದನ್ನು ದಾಟಿದೊಡನೆ ಈ ಭವ್ಯವಾದ ಬೆಟ್ಟ ಎದುರಿಗಿತ್ತು.

ಚಾರಣಿಗರ ಬಾಯಲ್ಲಿ 'ನಿಜಗಲ್ ಬೆಟ್ಟ' ಎಂದು ಜನಪ್ರಿಯವಾದ ಈ ಬೆಟ್ಟ ಮತ್ತು ತಾಣ, 'ಎಪಿಗ್ರಾಫಿಯ ಕರ್ನಾಟಿಕ' ಮತ್ತು ಮೈಸೂರು ಸಂಸ್ಥಾನದ ಪುರಾತತ್ತ್ವ ವರದಿಗಳ ಹೊತ್ತಿಗೆಗಳಲ್ಲಿ 'ಸುರಗಿರಿ ಸೀಮೆ' ಮತ್ತು 'ಸುರಗಿರಿ ದುರ್ಗ' ಎಂದು ಕರೆಸಿಕೊಂಡಿದೆ. 1946ರಲ್ಲಿ ಪ್ರಕಟವಾದ ಸಿ. ಹಯವದನ ರಾವ್ ಅವರ 'ಹಿಸ್ಟರಿ ಆಫ್ ಮೈಸೂರ್' (1399–1799) ಮತ್ತು 1925ರಲ್ಲಿ ಪ್ರಕಟವಾದ ಸಿ.ಎ. ಕಿನ್‌ಕೇಡ್ ಹಾಗೂ ರಾವ್ ಬಹಾದೂರ್ ಡಿ.ಬಿ. ಪರಾಸ್ನಿಸ್ ಅವರ 'ಹಿಸ್ಟರಿ ಆಫ್ ದಿ ಮರಾಠಾ ಪೀಪಲ್' ಹೊತ್ತಿಗೆಗಳಲ್ಲಿ ಮತ್ತಷ್ಟು ಮಾಹಿತಿ ದೊರೆಯಿತು.

1288ರಷ್ಟು ಹಳೆಯ ಶಾಸನವೊಂದರಲ್ಲಿ ರಾಜ ನೀಚಯ್ಯ ನಿಜಗಲಿಪುರವನ್ನು ಶಿವ ಮಲ್ಲಿಕಾರ್ಜುನ ದೇವರಿಗೆ ಕೊಡುಗೆ ಕೊಟ್ಟ ಉಲ್ಲೇಖವಿದೆ. 1589ರ ತಾಮ್ರಪತ್ರದಲ್ಲಿ ಪೆಣುಗೊಂಡವನ್ನು ಆಳಿದ ರಾಜ ಶ್ರೀರಂಗರಾಯ ನಿಧನವಾದಾಗ, ಆತನ ತಮ್ಮ ವೆಂಕಟಪತಿದೇವರಾಯನನ್ನು ಸುರಗಿರಿಯ ರಾಜನಾಗಿ ಪಟ್ಟಾಭಿಷೇಕ ಮಾಡಿದ ಉಲ್ಲೇಖವಿದೆ. ನಂತರ ಗೋಲ್ಕೊಂಡಾದ ರಾಜ ಮಲ್ಲಿಕ್ ಇಬ್ರಾಹಿಂನ ಮಗ ಮೊಹಮ್ಮದ್ ಶಾ ಸುರಗಿರಿಯನ್ನು ಆಕ್ರಮಿಸಲು ಬಂದಾಗ, ವೆಂಕಟಪತಿ ತನ್ನ ಸೇನೆಯೊಂದಿಗೆ ಅವನಿಗೆ ಬಲವಾದ ಉತ್ತರ ಕೊಟ್ಟು ಹಿಮ್ಮೆಟ್ಟಿಸಿ ಗೋಲ್ಕೊಂಡಾಗೆ ಓಡುವಂತೆ ಮಾಡಿ ಭರ್ಜರಿ ಜಯಗಳಿಸಿದ ವರದಿ ಇದೆ.

ಬಂಡೆಗಳ ನಡುವೆ ಹಾಯುತ್ತಾ ಬೆಟ್ಟದ ಬಳಿಗೆ ಬಂದಾಗ, ಎದುರಿಗೆ ಈಗಷ್ಟೇ ಮೆಟ್ಟಿಲುಗಳನ್ನು ಕೆತ್ತುತ್ತಿರುವ ಬೃಹತ್ ಕಠಿಣಶಿಲೆ ಕಂಡಿತು. ಅದನ್ನು ಹತ್ತಿದೊಡನೆ ಸುರಗಿರಿ ದುರ್ಗದ 'ದಕ್ಷಿಣ ದ್ವಾರ' ಸಿಕ್ಕಿತು. ಇಲ್ಲಿ ಕೋಟೆಯ ಅವಶೇಷಗಳು ಮತ್ತು ಬೆಟ್ಟದ ಮೇಲಿನ ಅತಿ ದೊಡ್ಡ ಕೊಳ 'ಅಕ್ಕ–ತಂಗಿಯರ ಕೊಳ' ಕಾಣಿಸಿತು. ಕೊಳದ ಎಡಭಾಗದಲ್ಲಿ ಮತ್ತಷ್ಟು ಮೇಲಕ್ಕೆ ಹತ್ತಿ, ಆಳೆತ್ತರ ಬೆಳೆದು ನಿಂತ ದಟ್ಟ ಗಿಡಗಂಟೆಗಳು, ಮುಳ್ಳಿನ ಪೊದರುಗಳನ್ನು ಸಾವರಿಸಿಕೊಂಡು ಮುನ್ನಡೆದಾಗ, ಶಿಥಿಲವಾದ ಲಕ್ಷ್ಮೀ ನರಸಿಂಹ ದೇವಾಲಯ ತಲುಪಿದ್ದೆ. ಅದರ ಬದಿಯಲ್ಲಿ ಮತ್ತೊಂದು ದೇವಾಲಯ ಇದಕ್ಕೆ ಅಂಟಿದಂತಿತ್ತು.

ಮೊದಲ ದೇವಾಲಯದ ಮುಖಮಂಟಪ, ಅಂತರಾಳಗಳನ್ನು ದಾಟಿ ಒಳಗೆ ಬಂದರೆ, ಮೂರನೇ ಪ್ರವೇಶ ದ್ವಾರ ಗರ್ಭಗುಡಿಗೆ ತೆರೆದುಕೊಳ್ಳುತ್ತದೆ. ಗರ್ಭಗುಡಿ ಮೇಲೆ ಶಿಥಿಲವಿದ್ದರೂ ಗೋಪುರವಿನ್ನೂ ನೇರ ನಿಂತಿದೆ. ಗುಡಿಯ ಈ ಮೂರೂ ಪ್ರವೇಶ ದ್ವಾರಗಳಲ್ಲಿ ಎರಡೂ ಬದಿಗೆ ಸುಂದರವಾಗಿ ಕೆತ್ತನೆಗೊಂಡ ಜಯ–ವಿಜಯ ದ್ವಾರಪಾಲಕರಿದ್ದಾರೆ. ಕುಸಿಯುತ್ತಿರುವ ತಾರಸಿ ಅನೇಕ ಕಡೆ ಬಿದ್ದೇ ಹೋಗಿದೆ. ಉಳಿದ ಭಾಗ, ಒಂಟಿಗಾಲಲ್ಲಿ ನಿಂತ ಕಂಬಗಳ ಮೇಲೆ ಅಪಾಯಕಾರಿಯಾಗಿ ಇನ್ನೂ ಉಳಿದಿದೆ. ಮೊದಲ ಬಾರಿ ಇಲ್ಲಿಗೆ ಬಂದಾಗ, ಅತ್ಯಂತ ಪುರಾತನವಾದ ಈ ದೇವಾಲಯದ ಗರ್ಭಗುಡಿ ಖಾಲಿ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಮತ್ತೊಮ್ಮೆ ಬೆಟ್ಟ ಹತ್ತಿ ನೋಡಿದಾಗ, ಗರ್ಭಗುಡಿಯಲ್ಲಿ ಹೊಸದಾಗಿ ಸ್ಥಾಪಿಸಿರುವ ಲಕ್ಷ್ಮಿ ನರಸಿಂಹ ದೇವರ ವಿಗ್ರಹ ಕಂಡಿತು.

